ಅವಲಕ್ಕಿ, ಲವಂಗ, ಏಲಕ್ಕಿ, ದಾಲ್ಚಿನ್ನಿ ಕೊಂಡುಕೊಂಡು ಸಾಯಂಕಾಲ ಹಿಂದಿರುಗುತ್ತಿದ್ದ ರಂಗನಾಥರಾಯರಿಗೆ ಅವರ ಹಾಗೆಯೇ ಏನನ್ನೋ ಕೊಂಡುಕೊಳ್ಳುವುದಕ್ಕಾಗಿ ಸೈಕಲನ್ನು ದೂಡಿಕೊಂಡು ಹೋಗುತ್ತಿದ್ದ ಸಿಸ್ಟರ್ ರೋಸಿ ಕಾಣಿಸಿದರಂತೆ. ಅವರನ್ನು ಇನ್ನೇನು ಮಾತಾಡಿಸಬೇಕೆನ್ನುವಾಗಲೇ ಸ್ವಲ್ಪ ದೂರದಲ್ಲಿ ನಡೆದುಬರುತ್ತಿದ್ದ ಸಾಂಬಮೂರ್ತಿ ಇದ್ದಕ್ಕಿದ್ದಂತೆ ಜನರ ಮಧ್ಯೆ ತೂರಿಕೊಂಡು ಕಣ್ಮರೆಯಾದನಂತೆ. ಹಾಗೆಂದು ಅವರು ತಮ್ಮ ಹೆಂಡತಿಗೆ ಹೇಳುತ್ತಿರುವಾಗಲೇ ಬಾಲಕೃಷ್ಣ ಒಳಗೆ ಬಂದದ್ದನ್ನು ನೋಡಿ ಬಾಯಿ ಮುಚ್ಚಿಕೊಂಡಿದ್ದರು.

ಕವಿದ ಮಂಜಿನಿಂದಾಗಿ ಎಲ್ಲೆಲ್ಲೂ ಮಬ್ಬು ಮಬ್ಬು. ಬಾಲಕೃಷ್ಣನ ಮನಸ್ಸಿನಲ್ಲಿ ಸಿಸ್ಟರ್ ರೋಸಿಯವರು ಈ ಮಂಜಿನಲ್ಲಿ ಸ್ಕೂಲಿಗೆ ಬರದೆ ಹೋದರೆ ಎಂದು ಆತಂಕ. ಅವರು ದಿನವೂ ಸ್ಕೂಲಿಗೆ ಬರುತ್ತಿದ್ದದ್ದು ಸೂಲಿಬೆಲೆಯಿಂದ – ಅದೂ ಸೈಕಲ್ಲಿನಲ್ಲಿ. ಅದರ ಕ್ಯಾರಿಯರಿನಲ್ಲಿ ಖಾಕಿ ಬಣ್ಣದ ಒಂದು ಚೀಲವಿರುತ್ತಿತ್ತು.

ಅವರಿಗೆ ಇಪ್ಪತ್ತು ಇಪ್ಪತ್ತೆರಡು ವರ್ಷ ಕೂಡ ತುಂಬಿರಲಿಕ್ಕಿಲ್ಲ. ಎತ್ತರದ ನಿಲುವು. ಮೈತುಂಬ ಕಣ್ಣು ಕುಕ್ಕುವಷ್ಟು ಬೆಳ್ಳಗಿನ ನಿಲುವಂಗಿ; ತಲೆಗೆ ಸುತ್ತಿಕೊಂಡಿರುತ್ತಿದ್ದ ನಶ್ಯದ ಬಣ್ಣದ ವಸ್ತ್ರದಲ್ಲಿ ಬಹುಮಟ್ಟಿಗೆ ಗುಲಾಬಿ ಬಣ್ಣದಲ್ಲಿರುತ್ತ ಯಾವಾಗಲೂ ನಗು ನಗುತ್ತಿದ್ದ ಮುಖ. ಅವರ ಆ ಮುಖವೇ ಅಷ್ಟು ಚೆನ್ನಾಗಿರಬೇಕಾದರೆ ಇನ್ನು ಅವರ ತಲೆಯ ಕೂದಲು ಇನ್ನೆಷ್ಟು ಚೆನ್ನಾಗಿರಬೇಡ ಎಂದು ಬಾಲಕೃಷ್ಣ ಎಷ್ಟೋ ಸಲ ಯೋಚಿಸಿದ್ದುಂಟು. ಒಂದೊಮ್ಮೆ ಅವರೇನಾದರೂ ತುಸು ಜೋರಾಗಿ ನಕ್ಕುಬಿಟ್ಟರೆ ಬಿಳಿಯ ನಿಲುವಂಗಿಯ ಜೊತೆ ಸ್ಪರ್ಧೆಗೆ ನಿಲ್ಲುವಂತೆ ಫಳಫಳವೆನ್ನುತಿತ್ತು ಅವರ ಹಲ್ಲು. ಒಟ್ಟನಲ್ಲಿ ನೋಡುತ್ತಲೇ ಇರಬೇಕೆನ್ನಿಸುವ ವ್ಯಕ್ತಿತ್ವ. ಅವರು ನಡೆದರೆ ಸಂತೋಷದ ಅಲೆಗಳನ್ನೆಬ್ಬಿಸುವ ಏರಿಳಿತ. ಎಂಥ ಅವಸರವಿದ್ದರೂ ಹೆಜ್ಜೆಗಳ ಲೆಕ್ಕ ತಪ್ಪಬಾರದೆನ್ನುವಂತೆ ನಿಧಾನವಾಗಿ ನಡೆಯುತ್ತಿದ್ದರು. ಬಾಲಕೃಷ್ಣನಿಗೆ ಅವರ ಮುಂಗೈಗಳನ್ನೇ ನೋಡುತ್ತಿರಬೇಕೆನಿಸುತ್ತಿತ್ತು. ಅಷ್ಟು ಚಂದದ ಮುಂಗೈಗಳು. ಬಿಳಿ ನಿಲುವಂಗಿಯ ತೋಳಿನಿಂದ ಹೊರಗಿಣಿಕಿ ಆಡುತ್ತಿದ್ದ ಆ ಮುಂಗೈಗಳು ಬೆಳಗಿನ ಎಳೆಬಿಸಿಲಿನಲ್ಲಿ ಹೂವಿನಂಥ ಮೃದುವನ್ನು ತುಳುಕಿಸುತ್ತಿದ್ದವು. ಬೆರಳುಗಳಂತೂ ನೀಳವಾಗಿದ್ದವು, ಮಾಟವಾಗಿದ್ದವು. ಬಳೆಗಳಿದ್ದಿದ್ದರೆ ಥೇಟ್ ಅಮ್ಮನ ಮುಂಗೈಗಳೇ.

ಬಾಲಕೃಷ್ಣ ಬೆನ್ನಿಗೆ ಚೀಲವೇರಿಸಿಕೊಂಡು ಪುಟು ಪುಟು ನಡೆಯುತ್ತಾ ಹೊರಟ. ಹೊರಗಡೆ ಯಾರೋ ಆಕಾಶದಿಂದ ಪನ್ನೀರು ಚೆಲ್ಲುತ್ತಿರುವಂತೆ ಸುರಿಯುತ್ತಿರುವ ಮಂಜು. ದಿಗಂತದುದ್ದಕ್ಕೂ ಮೋಡಗಳೇ ಕೆಳಕ್ಕಿಳಿದು ಅಲ್ಲಿಂದ ಮೆಲ್ಲಮೆಲ್ಲಗೆ ಮುಂದೆ ಮುಂದೆ ಸರಿದು ಬರುತ್ತಿರುವಂತೆ; ಸರಿದು ಬರುತ್ತ ಗಿಡಮರ, ಹೊಲಗದ್ದೆ, ಕೆರೆಕಾನು, ಮನೆಮಾರು ಎಲ್ಲವನ್ನೂ ನುಂಗಿ ಕಡೆಗೆ ತಾನೇತಾನಾಗಿಬಿಟ್ಟಂತೆ. ಎದುರಿಗಿದ್ದವರು ಕಾಣಿಸುತ್ತಿರಲಿಲ್ಲ. ಪಕ್ಕದಲ್ಲಿ ಯಾರೇ ಮಾತಾಡಿದರೂ ಕೇಳಿಸದಂಥ ಸ್ಥಿತಿ. ಬೀದಿಯಲ್ಲಿ ಸೈಕಲ್ಲುಗಳು, ಎತ್ತಿನ ಗಾಡಿಗಳು, ಒಂದೆರಡು ಕಾರುಗಳು ತುಂಬ ನಿಧಾನವಾಗಿ ಚಲಿಸುತ್ತಿದ್ದವು. ಈಶ್ವರ ಗುಡಿಯ ಮುಂದಿದ್ದ ಎರಡು ತೆಂಗಿನ ಮರಗಳ ಬುಡವಷ್ಟೇ ಮಬ್ಬುಮಬ್ಬಾಗಿ ಕಾಣಿಸುತ್ತಿದ್ದರೆ ಮೇಲಿನ ಗರಿಗಳನ್ನು ಮುಚ್ಚಿಟ್ಟುಕೊಂಡುಬಿಟ್ಟಿತ್ತು ಮಂಜು. ಅದು ಮರಗಳನ್ನು ನುಂಗಿದ ಹಾಗೆಯೇ ಹಳ್ಳದ ಮೇಲಿದ್ದ ಸಣ್ಣ ಸೇತುವೆಯನ್ನು ಕೂಡ ನುಂಗಿಬಿಟ್ಟಿತ್ತು. ಅತ್ತ ಇತ್ತ ಹೋಗುತ್ತಿದ್ದವರು ಆಗೀಗ ಕಾಣಿಸಿಕೊಂಡು ತಕ್ಷಣ ಮರೆಯಾಗುತ್ತಿದ್ದರು. ಎಲ್ಲಿಗೋ ಹೊರಟಿದ್ದವರು ಸರಿಯಾಗಿ ದಾರಿ ಕಾಣದೆ ಕಂಗಾಲಾಗುತ್ತಿದ್ದರು. ಇಂಥ ಮಂಜು ಕವಿದಾಗ ಕಾಲವೇ ಮುಂದೆ ಸರಿಯದೆ ನಿಂತುಬಿಟ್ಟಂತೆ.

ಭುವನಗಿರಿ ನಿಧಾನವಾಗಿ ಎಚ್ಚರಗೊಳ್ಳುತ್ತಿದ್ದ ಸಮಯ. ಯಾರದೋ ಮನೆಯಲ್ಲಿ ಮಗು ಅಳುತ್ತಿತ್ತು. ಇನ್ನೆಲ್ಲೋ ಗೂರಲು ಹತ್ತಿದವರೊಬ್ಬರು ಕೆಮ್ಮುತ್ತಿದ್ದರು. ಹುಣಸೇಮರದ ಬೀದಿಯ ಕಮಲಜ್ಜಿ ಎಂದಿನಂತೆ ಉಪ್ಪರಿಗೆಯ ಕಿಟಕಿಯ ಬಳಿ ಕುಳಿತುಕೊಂಡು ಏನೂ ಕಾಣಿಸದ ಬೀದಿಯನ್ನೇ ನೋಡುತ್ತ ನಿಟಿಕೆ ಮುರಿಯುತ್ತಿದ್ದರು. ಬಾವಿ ಕಟ್ಟೆಯ ಬಳಿ ಕಂದುಬಣ್ಣದ ಒಂದು ಹಸು ನಿಂತುಕೊಂಡೇ ನಿದ್ರಿಸುತ್ತಿತ್ತು. ಬೀದಿಯ ಎರಡು ಪಕ್ಕಗಳಲ್ಲೂ ಇದ್ದ ಮನೆಗಳು ಚಳಿಗಾಳಿಯನ್ನು ತಡೆಯಲಾಗದೆಂದು ಮುದುರಿಕೊಂಡು ಕೂತಿದ್ದವು. ಕೆಲವು ಮನೆಗಳ ಕಿಟಕಿ ತೆರೆದಿದ್ದರೂ ಒಳಗೆ ಬೆಳಕಿರಲಿಲ್ಲ. ಒಂದೆರಡು ಮರಗಳಲ್ಲಿ ಹಕ್ಕಿಗಳು